ಶ್ರೀ ಮುರುಗಪ್ಪ ಹೊನ್ನಕೆರೆ ರವರ ಸರ್ವೆ.ನಂ.56/1 ಮತ್ತು 56/4, ಕೋಳೂರು-ಗ್ರಾಮ, ಕೋಳೂರು-ಗ್ರಾಮ ಪಂಚಾಯತಿ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 06-10 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 34,812 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ತೆರೆದ ಅರೆ-ಯಾಂತ್ರಿಕೃತ ಪದ್ಧತಿಯ (ಸೆಮಿ ಮೆಕ್ಯಾನಿಸೆಡ್ ಮೆಥೆಡ್) ಪ್ರಕಾರ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುವುದಕ್ಕೆ ಸಂಬಂಧಿಸಿದಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಉದ್ದೇಶಿಸಿರುತ್ತಾರೆ.

ದಿನಾಂಕ :18.10.2022

ವೇಳೆ : ಬೆಳಿಗ್ಗೆ.11.30 ಘಂಟೆ.

ಸ್ಥಳ : ಉದ್ದೇಶಿತ ಯೋಜನೆಯ ಪ್ರದೇಶ,
ಶ್ರೀ ಮುರುಗಪ್ಪ ಹೊನ್ನಕೆರೆ ರವರ
ಸರ್ವೆ.ನಂ.56/1 ಮತ್ತು 56/4, ಕೋಳೂರು-ಗ್ರಾಮ,
ಕೋಳೂರು-ಗ್ರಾಮ ಪಂಚಾಯತಿ,
ಕೊಪ್ಪಳ-ತಾಲೂಕು ಮತ್ತು ಜಿಲ್ಲೆ.

ಶ್ರೀ ಮುರುಗಪ್ಪ ಹೊನ್ನಕೆರೆ ರವರು, ಜಿಲ್ಲೆಯಲ್ಲಿ 06-10 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 34,812 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ತೆರೆದ ಅರೆ-ಯಾಂತ್ರಿಕೃತ ಪದ್ಧತಿಯ (ಸೆಮಿ ಮೆಕ್ಯಾನಿಸೆಡ್ ಮೆಥೆಡ್) ಪ್ರಕಾರ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 18.10.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಶ್ರೀ ಮುರುಗಪ್ಪ ಹೊನ್ನಕೆರೆ ರವರ ಸರ್ವೆ.ನಂ.56/1 ಮತ್ತು 56/4, ಕೋಳೂರು-ಗ್ರಾಮ, ಕೋಳೂರು-ಗ್ರಾಮ ಪಂಚಾಯತಿ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-5 |
| ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಕ್ರಿಯೆಯ ಛಾಯಾ ಚಿತ್ರಗಳು | : | ಅನುಬಂಧ-6 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು. | | ಅನುಬಂಧ-7 |
| ಸಾರ್ವಜನಿಕರು/ಪರಿಸರಆಸಕ್ತ ಸಂಪನ್ಮೂಲವ್ಯಕ್ತಿಗಳುಸಲ್ಲಿಸಿದ ಅಹವಾಲುಗಳು | : | ಅನುಭಂಧ-8 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ: 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ:ಹಿಭೂವಿ/ಜೆ.ಅಂ.ಕ/ಅಂ.ನಿ/ಕೊಪ್ಪಳ/ತಾಂತ್ರಿಕ/2020-21/188 ದಿನಾಂಕ:29.03.2021 ರಂದು "ಸಾಮಾನ್ಯ ಮರಳು ಗಣಿಗಾರಿಕೆ" ಯೋಜನೆಯನ್ನು ಅನುಮೋಧಿಸಿ, ಒಟ್ಟು 06.10 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 34,812 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ(ಅರೆ-ಯಾಂತ್ರಿಕೃತ ಪದ್ಧತಿ) ಯನ್ನು ಉತ್ಪಾದನೆಯ ಯೋಜನೆಯನ್ನು ಹೊಂದಿದೆ. (ಕ್ವಾರಿ ಯೋಜನೆಯ ಅವಧಿ 03 ವರ್ಷ). ಕ್ವಾರಿ ಯೋಜನೆಯನ್ನು ಅನುಮೋದಿಸಿ ವರ್ಷಕ್ಕೆ 34,812 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆಯನ್ನು ಉತ್ಪಾದನೆಯ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಎ ಅಧಿಸೂಚನೆ ದಿನಾಂಕ: 14-09-2006 ರ ಪ್ರಕಾರ ಈ ಗಣಿಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆದಾರದ ಮೇಲೆ ಸದರಿ ಯೋಜನೆಯ Standards Terms of Reference ಅನ್ನು ದಿನಾಂಕ: 14.01.2022 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಕೋರುವಂತೆ ಶ್ರೀ ಮುರುಗಪ್ಪ ಹೊನ್ನಕೆರೆ ಇವರು ತಿಳಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಮತ್ತು ಸಮಯವನ್ನು ನೀಡಲು ದಿನಾಂಕ:-30.09.2022 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 18.10.2022 ರಂದು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ.

ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ " ವಿಜಯವಾಣಿ" (ಕನ್ನಡ) ," ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್" (ಆಂಗ್ಲ ಭಾಷೆ) ಯಲ್ಲಿ ದಿನಾಂಕ: 02.10.2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 18.10.2022ರಂದು, ಬೆಳಿಗ್ಗೆ.11.30 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎಸ್ ಸಿ ಸುರೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಶ್ರೀಮತಿ ಸಾವಿತ್ರಿ ಬಿ ಕಡಿ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ ಮತ್ತು ಕೊಪ್ಪಳ ತಹಶೀಹಲ್ದಾರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸ್ವಾಗತಿಸಿದರು, ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಎಂಟು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಹಾರಿಝಾನ್ ವೆಂಚುರಿಸ್ ಇವರು ಸದರಿ ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು (PPT) ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

ಶ್ರೀ. ಶರಣಪ್ಪ ತಂದೆ ರಾಯಪ್ಪ ಕೋಳೂರು-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಮರಳು ಗಣಿಗಾರಿಕೆಯ ನಡೆಸುವುದರಿಂದ ಪಕ್ಕದ ರೈತರ ಹೊಲದಲ್ಲಿರುವ ಮರಳು ಕೊಚ್ಚಿಕೊಂಡು ಹೋಗುವ ಸಾಧ್ಯತೆ ಇರುತ್ತದೆ ಮತ್ತು ಹೊಲದ ಪಕ್ಕ ಬದು ಹಾಕುವುದರಿಂದ ಹೊಲದಲ್ಲಿರುವ ಮರಳು ಉಳಿಯುತ್ತದೆ.
- ನನ್ನ ಹೊಲದ ಪಕ್ಕದಲ್ಲಿರುವ 25 ಎಕರೆ ಭೂ ಕುಸಿತ ಉಂಟಾಗಿ ನನ್ನ ಜಮೀನು ಹಾಳಾಗುತ್ತದೆ ಮತ್ತು ನನ್ನ ಹೊಲದ ಪಕ್ಕದಲ್ಲಿ ಬದು ಹಾಕಿ ಮರಳು ಗಣಿಗಾರಿಕೆಯನ್ನು ನಡೆಸಬೇಕು ಎಂದು ತಿಳಿಸಿದರು.

ಶ್ರೀ. ಮಲ್ಲೇಶಪ್ಪ ಹೂಗಾರ, ಕೋಳೂರು-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಗಣಿಗಾರಿಕೆಯ ಸ್ಥಳದ ಸ್ವಲ್ಪ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಇದ್ದು, ಈ ರಸ್ತೆಯಲ್ಲಿ ಅತೀಯಾಗಿ ವಾಹನಗಳು ಓಡಾಡುತ್ತಿರುತ್ತವೆ. ಸದರಿ ಮರಳು ಗಣಿಗಾರಿಕೆ ಪ್ರಾರಂಭಿಸುವುದರಿಂದ ಮರಳನ್ನು ತೆಗೆದುಕೊಂಡು ಹೊಗಲು ಬರುವ ವಾಹನಗಳು ಸಹ ಗ್ರಾಮದಲ್ಲಿ ಓಡಾಡುವುದರಿಂದ ತೊಂದರೆಯಾಗುತ್ತದೆ ಎಂದು ತಿಳಿಸಿದರು.

ಶ್ರೀ. ದೇವರಾಜ ಕೋಳೂರು-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಮರಳು ಗಣಿಗಾರಿಕೆ ಇರುವ ಸರ್ವೆ.ನಂ.53, ನಮ್ಮ ಹೊಲದ ಸರ್ವೆ.ನಂ.52 ಇರುವುದರಿಂದ ಮರಳು ಗಣಿಗಾರಿಕೆ ಮಾಡುವುದರಿಂದ ನಮ್ಮ ಪಕ್ಕದ ಹೊಲದಲ್ಲಿ ಭೂ ಕುಸಿತ ಉಂಟಾಗುವ ಸಾಧ್ಯತೆ ಇರುತ್ತದೆ..
- ಸದರಿ ಗಣಿಗಾರಿಕೆಯನ್ನು ನಡೆಸಲು ಪಕ್ಕದ ಜಮೀನಿನಿಂದ ಇಂತಿಷ್ಟು ದೂರ ಇರಬೇಕು ಎಂಬುದರ ಬಗ್ಗೆ ಏನಾದರೂ ಮಾರ್ಗಸೂಚಿ ಇರುತ್ತದೆಯೇ ಎಂದು ಕೇಳಿದರು.

ಯೋಜನೆಯ ಸಲಹೆಗಾರರಾದ ಮೆ: ಹಾರಿಝಾನ್ ವೆಂಚುರಿಸ್ ಇವರು

- ಗಣಿಗಾರಿಕೆಯ ಜಮೀನಿನ ಪಕ್ಕಕ್ಕೆ ಹೊಂದಿಕೊಂಡಿರುವ ಜಮೀನಿನಿಂದ 7.5 ಮೀಟರ್ ಜಾಗ ಬಿಟ್ಟು ಗಣಿಗಾರಿಕೆಯನ್ನು ನಡೆಸಲಾಗುವುದು ಎಂದು ತಿಳಿಸಿದರು.
- ಅಕ್ಕಪಕ್ಕದ ಜಮೀನುಗಳಿಂದ ಸುಮಾರು 25-30 ಅಡಿ ಬಿಟ್ಟು ಮರಳು ಗಣಿಗಾರಿಕೆಯ ಕಾರ್ಯಾಚರಣೆ ನಡೆಸಲಾಗುವುದು.

ಶ್ರೀ. ಶಾಲಿನಿ ಎನ್‌ವಿರಾನ್‌ಮೆಂಟ್ ಎಜುಕೇಶನ್ ಸೋಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸಿ.ಎಸ್.ಆರ್ ನಿಯಮಗಳಡಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಳವಡಿಸುವುದು.
- ಕ್ವಾರಿ ಸುತ್ತ ಮುತ್ತಲೂ ಮರಗಳನ್ನು ಬೆಳೆಸುವುದು.
- ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು.

ಶ್ರೀಮತಿ ಕೆ. ಶಾಮಲಾ ದೇವಿ – ಸಂಯೋಜಕರು, ಮಿನಾಕ್ಷಿ ರೂರಲ್ ಡೆವಲಪ್‌ಮೆಂಟ್ ಸೋಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸಿ.ಎಸ್.ಆರ್ ನಿಯಮಗಳಡಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.
- ಕ್ವಾರಿಯನ್ನು ಪ್ರಾರಂಬಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.

ಶ್ರೀ ಎಸ್ ನರಸಿಂಹಲು ಸಂಯೋಜಕರು, ಕೀರ್ತಿ ಎನ್‌ವಿರಾನ್‌ಮೆಂಟ್ ಸೋಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.
- ಕ್ವಾರಿಯನ್ನು ಪ್ರಾರಂಬಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.

ಶ್ರೀ ಬಿ ವೆಂಕಟೇಶ್ ಹರಿತಾ ಎಜುಕೇಶನಲ್ ರೂರಲ್ ಸೋಸೈಟಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸಿ.ಎಸ್.ಆರ್ ನಿಯಮಗಳಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಉಪಯೋಗಿಸುವುದು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷರುಗಳು ಪರಿಸರ ಅಧಿಕಾರಿಗಳಿಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ಹೇಳಿಕೆಗಳನ್ನು ಕ್ರೋಢೀಕರಿಸಿ ಕನ್ನಡದಲ್ಲಿ ನಡುವಳಿಗಳನ್ನು ತಯಾರಿಸಲು ಸೂಚಿಸಿದರು.

ಮಾನ್ಯ ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸುತ್ತಾ ಸಾರ್ವಜನಿಕ ಆಲಿಕೆ ಸಭೆಯನ್ನು ಮುಕ್ತಾಯಗೊಳಿಸಿ ನಡುವಳಿಗಳನ್ನು ಮಂಡಳಿಯ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದರು.

(ಸಾವಿತ್ರಿ ಬಿ ಕಡಿ ಕ.ಆ.ಸೇ)
ಅಪರ ಜಿಲ್ಲಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು ಕೊಪ್ಪಳ,